ಕೋಲಾರ ಡಿಸ್ಟ್ರಿಕ್ಟ್.

ಸ್ರ 1908ನೆ ಇಸವಿ ಡಿಸೆಂಬರು 19ನೆ ತಾರೀಖಿನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರವರು, ಬಿ. ಎ., ಬಿ. ಎಲ್., ಪ್ರೆಸಿಡೆಂಟ್.
2. ,, ಎ. ವೇದಾಂತಪೇಸಗಂ ಐಯ್ಯಂಗಾರ್ರವರು, ವೈಸ್ ಪ್ರೆಸಿಡೆಂಟ್.
3. ,, ಜಿ. ಆರಾವಮುದೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಸಬ್ ಡಿವಿಜ್ ಆಫಿಸರ್, ಚಿಕ್ಕಬಳ್ಳಾಪುರ.
4. ,, ಮೀರ್ ಹಂಜ್ರಾ ಹುಸೇನ್ ಸಾಹೇಬರವರು, ಬಿ. ಎ., ಬಿ. ಎಲ್., ಸಬ್ ಡಿವೀಜ್ಯಆಫಿಸರ್, ಮಾಲೂರು.
5. ,, ವಿ. ಅಯ್ಯಾಸ್ವಾಮಿ ಅಯ್ಯರವರು, ಬಿ. ಎ., ಬಿ. ಸಿ. ಇ., ಎಗ್ಸಿಕ್ಯೂಟಿವ್ ಇಂಜನಿಯರ್, ಕೋಲಾರ.
6. ,, ಸಿ. ಜಿ. ಹನುಮಾಸಿಂಗ್, ಎಲ್. ಎಂ. ಅಂಡ್ ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಅಂಡ್ ಸ್ಯಾನಿಟರಿ ಆಫಿಸರ್.

ಸರ್ಕಾರಿ ಉದ್ಯೋಗವಿಲ್ಲದ ಇತರ ಮೆಂಬರುಗಳು.

ಕ್ಲಾಜು (ಡಿ)

7. ಮಿ॥ ಮಂಜಲಿ ಬೈರೆಗೌಡರು, ಕೋಲಾರ.
8. ,, ಪೀರ್ ನವಾಜ್‌ಖಾರ್ರು, ಬೌರಿಂಗ್‌ಪೇಟೆ.
9. ,, ಸಾಹುಕಾರ್ ಕಂಚಿ ಶ್ರೀನಪ್ಪಶೆಟ್ಟರು, ಚಿಂತಾಮಣಿ.
10. ,, ಕಾಸ್ಟ್ರಿ ಹೈದರ್‌ಸಾಹೇಬರು, ಮುಳಬಾಗಲು.
11. ,, ವೆಂಕಟರಮಣಪ್ಪನವರು, ಮಾಲೂರು.
12. ,, ಕೆ ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಹನುಮೇಗೌಡರು, ಶಿಡ್ಲಘಟ್ಟ.
14. ,, ಹಗ್ಗೀನಹಳ್ಳಿ ಕೃಷ್ಣಾಚಾರ್ರು, ಗೋರಿಬಿದನೂರು.
15. ,, ಶ್ರೀನಪ್ಪನವರು, ಬಾಗೇಪಲ್ಲಿ.
16. ,, ಆದಿನಾರಣಪ್ಪನವರು, ಗುಡಿಬಂಡೆ.

ಕ್ಲಾಸ್ (ಬಿ)

17. ,, ಉಮ್ಮಣ್ಣೆಯ್ಯನವರು, ಬವರಿಂಗ್‌ಪೇಟೆ.
18. ,, ಸಾಹುಕಾರ್ ಸೈಯದ್ ಬುರ್ಡ್ ಸಾಹೇಬರು, ಚಿಂತಾಮಣಿ
19. ,, ಕೆಟ್ಟಿ ಚಿಕ್ಕಣ್ಣನವರು, ಗುಡಿಬಂಡೆ.
20. ,, ನಾಗೇಗೌಡರು, ಮುಳಬಾಗಲ್.
21. ,, ಸೈಯದ್ ಫತ್ತುಲ್ಲಾ ಸಾಹೇಬರು, ಶ್ರೀನಿವಾಸಪುರ.

ಗೈರ್ ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ,, ಎಸ್. ಗೋಪಾಲರಾವ್, ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು, ಕೋಲಾರ.

ಸರ್ಕಾರಿ ಉದ್ಯೋಗವಿಲ್ಲದ ಇತರ ಮೆಂಬರುಗಳು.

ಕ್ಲಾಜು (ಡಿ).

2. ,, ಸಿ. ನಾರಾಯಣಸಾಮಿಶೆಟ್ಟರು, ಚಿಕ್ಕಬಳ್ಳಾಪುರ.

ಕ್ಲಾಜು (ಇ).

3. ,, ಅಮೀರ್‌ಹುಸೇನ್ ಸಾಹೇಬರು, ಕೋಲಾರ.
4. ,, ನರಸಿಂಹ ರೆಡ್ಡಿಯವರು, ಚಿಕ್ಕಬಳ್ಳಾಪುರ.

ಈ ಕೆಳಗೆ ನಮೂದು ಮಾಡಲ್ಪಟ್ಟ ಅವಲ್ಲಾರ್ರುಗಳು ಸಹಾ ಮೀಟಿಂಗಿನಲ್ಲಿ ಹಾಜರಿದ್ದರು :—

1. ಮೆ॥ ಬಿ. ಎಸ್. ವೆಂಕಟೇಶಯ್ಯನವರು, ಕೋಲಾರ.
2. ,, ಎ. ಎಸ್. ರಾಘವಾಚಾರ್ರವರು, ಚಿಂತಾಮಣಿ.
3. ,, ಮಹಮದ್ ಬಡೇದುಲ್ಲಾ, ಬವರಿಂಗ್‌ಪೇಟೆ.
4. ,, ವೈ. ನರಸಿಂಗರಾಯರು, ಶ್ರೀನಿವಾಸಪುರ.
5. ,, ವಿ. ಗೋಪಾಲರಾಯರು, ಬಾಗೇಪಲ್ಲಿ.
6. ,, ಸಿ. ಗೋವಾಲಾಚಾರು, ಮಾಲೂರು.
7. ,, ಕೆ. ಶ್ರೀನಿವಾಸರಾಯರು, ಚಿಕ್ಕಬಳ್ಳಾಪುರ.
8. ,, ಕೆ. ವೇದಾಂತ್ರಿಯಂಗಾರು, ಮುಳಬಾಗಲು.
9. ,, ಸಿ. ಕೇಶವಾಚಾರ್ರು, ಶಿಡ್ಲಘಟ್ಟ.
10. ,, ಕೆ. ಹನುಮಂತಕವಿಯವರು, ಗೋರಿಬಿದನೂರು.
11. ,, ಎಂ. ಅಹೋಬಲ ಶಾಸ್ತ್ರಿಗಳು, ಗುಡಿಬಂಡೆ.

1. 1908ನೆ ಇಸವಿ ಸೆಪ್ಟಂಬರು ಮಾಹೆ 21ನೆ ತಾರೀಖಿನಲ್ಲಿ ನಡೆದ ವಿಾಟಂಗಿನ ಪ್ರೊಸೀಡಿಂಗ್ಸನ್ನು ಓದಿ ನಿರ್ಧರಿಸಲ್ಪಟ್ಟಿತು.

2. ಕಂಟ್ರೋಲರ್ ಸಾಹೇಬರವರಿಂದ ಆಡಿಟ್ಟಾಗಿ ಬಂದ 1908ನೆ ಇಸವಿ ಜೂ॥ ಮಾಹೆಯ ಲೆಕ್ಕ ಓದಿ ರಿಕಾರ್ಡು ಮಾಡಲಾಯಿತು.

3. 1908ನೆ ಜೂ॥ ಆಖೈರಿಗೆ ಬಾಕೀಲಿರುವ ಡಿಸ್ಟ್ರಿಕ್ಟು ಫಂಡು ಕೆಲಸಗಳನ್ನು ಚಾಲ್ತಿ ಸಾಲ್‌ನಲ್ಲಿ ಪೂರೈಸತಕ್ಕ ಏರ್ಪಾಟು ಮಾಡಬೇಕೆಂದೂನ್ನೂ ಚಾಲ್ತಿ ಸಾಲಿನ ಕೆಲಸಗಳನ್ನು ಅವಶ್ಯಕವಿದ್ದವಟ್ಟಿಗೆ ತಡೆದು ಇದಕ್ಕಾಗಿ ಬೇಕಾಗುವ 11,620 ರೂಪಾಯಿಗಳನ್ನು ಬಡ್ಜಟ್‌ನಲ್ಲಿ "ಬಿ. ಪಬ್ಲಿಕ್ ವರ್ಕ್ಸ್" ಪೈಕಿ "ರಿಜರ್ವ್" ಮತ್ತು "ಜೂನಸ ವರ್ಕ್ಸ್" ವರಿಜಿನಲ್ ಮತ್ತು ರಿಪೇರ್ಸ್‌ಗಾಗಿ ದಾಖಲಾಗಿರುವ ವೊಬಲಗಿನಿಂದಲೆ ವಿಾಪ್ ಮಾಡಬೇಕೆಂದುನ್ನು ವೇಲ್ಲಂಡ ನೀಂಕಲಾ ಕೆಲಸಗಳ ತಃಖ್ತೆ ಮಂಜೂರಿಯಿಂದ ತಲಪಿದ 1908ನೆ ಇಸವಿ ಡಿಸೆಂಬರು 2ನೆ ತಾರೀಖಿನ 5232-3—ಎಲ್. ಬಿ. 160-08-2ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ಈ ಕೆಲಸಗಳು ಕೂಡಿದವಟ್ಟಿಗೂ ಜಾಗ್ರತೆಯಾಗಿ ಪೂರೈಸಬೇಕೆಂದು ತೀರ್ಮಾನ ಮಾಡಲಾಯಿತು.

4. 1908ನೆ ಇಸವಿಯ ಮೈಸೂರು ಜಿಲ್ಲೆ ಆಲ್‌ಮನಕ್ ಕಾಪಿಗಳು ಕೊಂಡುಕೊಳ್ಳುವದಕ್ಕೋಸ್ಕರ ಚಾಲ್ತಿ ಸಾಲಿನ ಡಿಸ್ಟ್ರಿಕ್ಟು ಫಂಡು ಬಡ್ಜಟ್ಟಿನಲ್ಲಿ ಯಾವ ಬಾಬಿನಲ್ಲಿ ವೊಬಲಗು ಕೊಡಲ್ಪಡಬಹುದೆಂದು ತಿಳಿಸಬೇಕೆಂತ 1908ನೆ ಸಪ್ಟಂಬರು 4ನೆ ತಾರೀಖಿನ 2300-40—ಸ್ಯಾ. 11—08—2ನೆ ನಂಬರು ಪ್ರೊಸೀಡಿಂಗ್ಸು ಓದಲಾಯಿತು.

1908ನೆ ಇಸವಿಯ ಅಂತ್ಯಭಾಗದಲ್ಲಿ ಹೆಲ್ತ್ ಆಲ್‌ಮನಕ್ ಕಾಪಿಗಳು ತಲಪಿದ್ದರಿಂದಲೂ ಮತ್ತು ಕನ್ನಡ ತರ್ಜುಮೆ ಸರಹಾ ಬರಲಿಲ್ಲವಾದ್ದರಿಂದ ಯಾರ ಉಪಯೋಗಕ್ಕೂ ಸರಿಯಾರಸ್ ಮಾಡಲ್ಪಟ್ಟಿತೊ ಅವರಿಗೆ ಉಪಯೋಗವಿಲ್ಲದೆ ಇರುವದ್ದರಿಂದಲೂ ಇದಕ್ಕಾಗಿ ಕೊಡತಕ್ಕ ವೊಬಲಗನ್ನ ಮಾಫ್ ಮಾಡಿಸಬೇಕಾಗಿ ಗವರ್ನಮೆಂಟಿನವರನ್ನ ಕೇಳಿಕೊಳ್ಳಬೇಕೆಂತ ತೀರ್ಮಾನಿಸಲಾಯಿತು.

5. 2,000 ಕಾಪಿಗಳ ಕನ್ನಡದ ಹೆಲ್ತ್ ಆಲ್‌ಮನಕ್ ಕೊಂಡುಕೊಳ್ಳತಕ್ಕ ಬಗ್ಗೆ ಮಂಜೂರಾದ ವಿಚಾರದಲ್ಲಿ ಇದಕ್ಕಾಗಿ ಬೇಕಾಗುವ ವೊಬಲಿಗೆ, ಚಾಲ್ತಿ ಸಾಲ್ ಬಡ್ಜಟ್ಟಿನ ಯಾವ ಬಾಬಿನಲ್ಲಿ ವಿಾಪ್ ಮಾಡಲ್ಪಡುತ್ತೆಂದು ತಿಳಿಸಬೇಕೆಂತ 1908ನೆ ಅಕ್ಟೋಬರು 17ನೆ ತಾರೀಖಿನ 3655-95—ಸ್ಯಾ. 11—08—12ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ಇಂಗ್ಲಿಷ್ ಕಾಪಿಗಳು ಗ್ರಾಮಾಂತರ ಜನಗಳಿಗೆ ಉಪಯೋಗವಿಲ್ಲದೆ ಇರುವದ್ದರಿಂದ 1909ನೆ ಇಸವಿಯ ಕನ್ನಡದ ಹೆಲ್ತ್ ಆಲ್‌ಮನಕ್ ಸಿದ್ಧವಾಗಿದೆಯೆ ಮತ್ತು ಯಾವಾಗ ನಿರೀಕ್ಷಿಸಬಹುದೆಂದು ಸ್ಯಾನಿಟೆರಿ ಕಮಿಷನರ್ ಸಾಹೇಬರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

6. 20 ರೂಪಾಯಿ ಕಮ್ಮಿಯಾಗಿ ತಲಬು ತೆಗದುಕೊಳ್ಳತಕ್ಕ ನೌಕರಮಾನೇರುಗಳಿಗೆ ಧಾನ್ಯದ ಅಲೋಯನ್ಸು ಮಂಜೂರಾಗಿರುವದರಿಂದ ಎಷ್ಟು ವೊಬಲಗು ಖರ್ಚಾಗಬಹುದೊ ಆ ವೊಬಲಗ್ಗೆ ಬಡಜೆಟ್ಟಿನಲ್ಲಿ ಯಾವ ಬಾಬಿನಿಂದ ಕೊಡಬಹುದೆಂದು ತಿಳಿಸಬೇಕೆಂತ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟಿನ ಸೆಕ್ರಿಟೆರಿ ಸಾಹೇಬರವರಿಂದ ತಲಪಿದ 1908ನೆ ನವಂಬರು 24ನೆ ತಾರೀಖಿನ 4851—ಲೋ. ಬೋ. ನೆ ನಂಬರು ಡಾಕೆಟ್ಟು ಓದಲಾಯಿತು.

ಈ ಬಗ್ಯಾಗಿ ಬೇಕಾಗುವ 650 ರೂಪಾಯಿಗಳಿಗೆ ಈ ಕೆಳಗೆ ವಿವರಿಸಿರುವಂತೆ ಕೊಡಬಹುದೆಂತಲೂ ಅವಶ್ಯಕವಾದ ಈ ಅಪ್ರೊಪ್ರಿಯೇಷನ್ ತಖ್ತೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

೫. X (3)	... ...	300 ರೂಪಾಯಿಗಳು.
,, (7)	... ...	350 ಡಿಟೋ
		650 ಡಿಟೋ

7. ಮದರಾಸ್ ಮತ್ತು ಮೈಸೂರ ಸೀಮೆಗೆ ಅವಶ್ಯಕವಾಗಿರುವ ಲೋಕಲ್ ಫಂಡು ಮ್ಯಾನುಯಲ್ ಬೇಕಾಗಿದ್ದಲ್ಲಿ ಇದಕ್ಕಾಗಿ ತಗಲಬಹುದಾದ ಖರ್ಚು ಯಾವ ಬಾಬಿನಿಂದ ವೊಬಲಗು ಕೊಡಲ್ಪಡುತ್ತೆಂದು ತಿಳಿಸಬೇಕೆಂತ ಜನರಲ್ ಮತ್ತು ರೆವಿನ್ಯೂ ಇಲಾಖೆಯ ಸೆಕ್ರಿಟೆರಿ ಸಾಹೇಬರವರಿಂದ ತಲಪಿದ 1908ನೆ ಜುಲೈ 25ನೆ ತಾರೀಖಿನ 896-903—ಲೋ ಬೋ. 17-18—2ನೆ ನಂಬರು ಡಾಕೆಟ್ ಓದಲಾಯಿತು.

ಬೇಕಾಗುವ ಕಾಪಿಗಳು ಇಷ್ಟೆಂದು ಕೇಳುವದಕ್ಕಿಂತ ಮುಂಚಿತವಾಗಿ ಇಲ್ಲಿನ ತಿಳುವಳಿಕೆ ಬಗ್ಯೆ ಬಂದು ಕಾಪಿ ಕಳುಹಿಸಬೇಕೆಂತ ಗವರ್ನಮೆಂಟಿನವರನ್ನ ಕೇಳಬೇಕೆಂತ ತೀರ್ಮಾನಿಸಲಾಯಿತು.

8. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕೆಲವು ರೈತರುಗಳಿಗೆ ಬೀಜದ ಹೋರಿಗಳನ್ನು ಕೊಂಡುಕೊಳ್ಳುವಂತೆ 1908ನೆ ಇಸವಿ ನವಂಬರು 11ನೆ ತಾರೀಖಿನ 4109-18—ಲೋ. ಬೋ. 85—08—4ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

9. ಮೈಸೂರು ಡಿಸ್ಟ್ರಿಕ್ಟು ಪ್ರೆಸಿಡೆಂಟ್ ಸಾಹೇಬರವರಿಂದ ಸಿಫಾರಸ್ ಮಾಡಿದ ಪ್ರಕಾರ ಅಲ್ಲಿನ ವರ್ಕ್ ಇನ್‌ಸ್ಪೆಕ್ಟರುಗಳನ್ನು ಇತರಕಡೆ ಕೆಲಸ ದೊರಕಿಸಿಕೊಡುವವರಿಗೆ ಅವರುಗಳನ್ನ ಇಟ್ಟುಕೊಳ್ಳಬಹುದೆಂದು 1908ನೆ ನವಂಬರು ಮಾಹೆಯ 16ನೆ ತಾರೀಖಿನ 4629-37—ಲೋ. ಬೋ 107—07—2ನೆ ನಂಬರು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

10. 1908ರಲ್ಲಿ ಪ್ರದರ್ಶನಶಾಲೆಗೆ ಈ ಡಿಸ್ಟ್ರಿಕ್ಟ್ಟಿನಿಂದ ಸಾಮಾನು ಕಳುಹಿಸಿದವರುಗಳಿಗೆ ಬಹುಮಾನಾರ್ಥವಾಗಿ ಮೂರು ಬ್ಯಾಂಜ್ ಮೆಡಲುಗಳು ಮತ್ತು ಸರಟಿಫಿಕೇಟುಗಳು ಕಳುಹಿಸಿರುವದಾಗಿ ಮೈಸೂರು ದಸರಾ ಕೈಗಾರಿಗೆ ಮತ್ತು ವ್ಯವಸಾಯ ಪ್ರದರ್ಶನಶಾಲೆಯ ಸೆಕ್ರೆಟೆರಿ ಸಾಹೇಬರವರಿಂದ ತಲಪಿದ 1908ನೆ ಇಸವಿ ನವಂಬರು 6ನೆ ತಾರೀಖಿನ A—91ನೆ ನಂಬರು ಲೆಟರ್ ಓದಲಾಯಿತು.

ವಸ್ತುಗಳು ಕಳುಹಿಸಿಕೊಟ್ಟವರುಗಳಿಗೆ ಮೆಡಲ್‌ಗಳು ಮತ್ತು ಸರಟಿಫಿಕೇಟುಗಳು ಕೊಡುವ ಉದ್ದೇಶ್ಯ ಆಯಾಯ ತಾಲ್ಲೂಕು ಬೋರ್ಡುಗಳಿಗೆ ಇವುಗಳನ್ನ ಕಳುಹಿಸಿಕೊಡಬೇಕೆಂದು ತೀರ್ಮಾನಿಸಲಾಯಿತು.

11. ಕೋಲಾರ ಮತ್ತು ಬೌರಿಂಗ್‌ಪೇಟೆಯ ಹಾಸ್ಪಿಟಲ್ ಅಸಿಸ್ಟೆಂಟ್ ಮತ್ತು ಸೂಲಗಿತ್ತಿ ಇವರುಗಳಿಗೆ ವಾಸಕ್ಕೋಸ್ಕರ ಕಟ್ಟಡ ಕಟ್ಟಿಕೊಡತಕ್ಕ ವಿಚಾರದಲ್ಲಿ ಇದಕ್ಕಾಗಿ ಮಾಮೂಲ್ ಪ್ರಕಾರ ಕೊಡತಕ್ಕ ಕಂಪ್ಬಬ್ಯೂರ್ಷ್‌ಗೆ ಏರ್ಪಾಟು ಮಾಡಬೇಕೆಂದು ಜನರಲ್ ಮತ್ತು ರೆವಿನ್ಯು ಡಿಪಾರ್ಟುಮೆಂಟಿನ ಸೆಕ್ರಿಟರಿ ಸಾಹೇಬರವರಿಂದ 1908ನೆ ಆಗಸ್ಟು 6ನೆ ತಾರೀಖಿನ 1327-34-ಮೆಡಿ. 18—07—2ನೆ ನಂಬರು ಲೆಟರ್ ಓದಲಾಯಿತು.

ಹಾಸ್ಪಿಟಲ್ ಅಸಿಸ್ಟೆಂಟರುಗಳಿಗೂ ಮತ್ತು ಸೂಲಗಿತ್ತಿಯರಿಗೂ ಪ್ರತ್ಯೇಕವಾಗಿ ಜಾಗಾ ಕೊಡತಕ್ಕದ್ದು ಅತ್ಯವಶ್ಯಕವೆಂದು ಬೋರ್ಡಿನವರಿಗೆ ಕಂಡುಬಂದಿದ್ದಾಗ್ಯೂ ಒಂದೇ ಗಂಟೆನಲ್ಲಿ 2,000 ರೂಪಾಯಿಗಳು ಕೊಡತಕ್ಕ ವಿಚಾರದಲ್ಲಿ ಬೋರ್ಡಿನವರಲ್ಲಿ ಹಾಲಿ ಇರುವ ಮೊಬಲಗು ಅಲ್ಪವಾಗಿರುತ್ತೆಂದು ಬಹಳ ವಿಷಾದಪಡಬೇಕಾಗಿದೆ. ಆದ್ದರಿಂದ ಇದಕಾಗಿ ಬೇಕಾಗುವ ಮೊಬಲಗನ್ನು ಸಾಲವಾಗಿ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳಬೇಕೆಂತಲೂ, ಒಂದುವೇಳೆ ಸರ್ಕಾರದವರು ಇದಕ್ಕೆ ಅನುಮೋದಿಸದಿಹೋದ ಸಂದರ್ಭದಲ್ಲಿ ಎಷ್ಟು ಮೊಬಲಗು ಸಾಧ್ಯವಾಗಬಹುದೋ ಅಷ್ಟನ್ನ ಬರುವ ವರುಷದ ಬಜ್ಜೆಟ್ಟಿನಲ್ಲಿ ಸೇರಿಸಲೂ ತಕ್ಕ ಏರ್ಪಾಟು ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

12. ನಡಿಂಪಲ್ಲಿ ಗ್ರಾಮದ ಶೀನೀರುಭಾವಿ ರಿಪೇರಿಗಾಗಿ ಈ ಮಾರ್ಜಿನ್ನಲ್ಲಿ ಕಾಣಿಸಿರುವ ಐಟಂನಿಂದ ಮೊಬಲಗು ಕೊಡಬಹುದೆಂದು ತಾಲ್ಲೂಕು ಬೋರ್ಡು ರೆಸಲ್ಯೂಷ್ಯನ್ ಪ್ರಕಾರ 67 ರೂಪಾಯಿನ ಫೈನಲ್ ಬಿಲ್ ಸಹಿ ಬಂದ. ಬೌರಿಂಗ್‌ಪೇಟೆ ತಾಲ್ಲೂಕು ಆವಿನಾಲರ 20—9-08ನೆ ಮಕ್ತುಂನ 148ನೆ ನಂಬರು ಇತ್ತಿಲ್ಲಿ ಓದಿ ಮಂಜೂರ್ಮಾಡಲಾಯಿತು.

57—300 ರೂಪಾಯಿನ ಪೈಕಿ ಕಾಮಸಂದ್ರದ ಬಾವಿ ರಿಪೇರಿಗಾಗಿ ಬಜ್ಜೆಟ್ಟಿನಲ್ಲಿ ಕಾಣಿಸಿರುವಂತೆ.	10 ರೂಪಾಯಿ ಮಂಜೂರಾಗಿರುವ ಕೆಲಸಗಳ ಬಾಬತು ನಿರೀಕ್ಷಣೆ ಮಾಡಬಹುದಾದ ಸೇವಿಂಗ್ಸು.

13. ಶ್ರೀನಿವಾಸಪುರ ತಾಲ್ಲೂಕು ರಾಯಲ್‌ಪಾಡು ಟ್ರಾವಿಲರ್ಸ್ ಬಂಗ್ಲೆಯನ್ನು ರಿಪೇರಿ ಮಾಡುವ ಉದ್ದೇಶ್ಯ 1,700 ರೂಪಾಯಿಗಳಿಗೆ ಬಂದು ಅಂದಾಜು, 490 ರೂಪಾಯಿಗಳಿಗೆ ಬಂದು ಅಂದಾಜು, ಈ ರೀತಿ ಎರಡು ಅಂದಾಜುಗಳ ನಿಸಿ ಕೋಲಾರ ಡಿವಿಜ್ ಎಸ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ ತಲಪಿದ 1908ನೆ ನವೆಂಬರು 3ನೆ ತಾರೀಖಿನ 813ನೆ ಡಾಕೆಟ್ ಓದಲಾಯಿತು.

ಈ ಟ್ರಾವಲರ್ಸ್ ಬಂಗ್ಲೆಗೂವತ್ತು ಕುದುರೆಲಾಯಕ್ಕೂ ರಿಪೇರಿ ಅತ್ಯವಶ್ಯಕವಿರುವದ್ದರಿಂದ ಮೇಲ್ಕಂಡ ಎಸ್ಟಿಮೇಟುಗಳ ಪೈಕಿ 490 ರೂಪಾಯಿನ ಎಸ್ಟಿಮೇಟ್ ಮಂಜೂರ್ಮಾಡಬಹುದೆಂದುನ್ನು ಇದಕ್ಕಾಗಿ ಬೇಕಾಗುವ ಮೊಬಲಗು ಪಬ್ಲಿಕ್ ವರ್ಕ್ಸ್ ಇಲಾಖೆಯವರ ವಶದಲ್ಲಿರುವ ರಿಜರ್ವ್ಡ್ ಗ್ರಾಂಟ್ ಪೈಕಿ ಕೊಡಬಹುದೆಂದು ತೀರ್ಮಾನಿಸಲಾಯಿತು.

14. ಜನಗಳ ಅನುಕೂಲತೆಗೋಸ್ಕರ ಗಂಟಿಂವಾರಿಪಲ್ಲಿ ಟ್ರಾವಲರ್ಸ್ ಬಂಗ್ಲೆ ಎದುರಿಗೆ ಇರತಕ್ಕ ಮಂಟಪವನ್ನು ರಿಪೇರಿ ಮಾಡುವದಕ್ಕೆ 65 ರೂಪಾಯಿನ ಅಂದಾಜು ನಿಸಿ ಬಾಗೆಪಲ್ಲಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ 1908ನೆ ಸೆಪ್ಟಂಬರು 30ನೆ ತಾರೀಖಿನ 329ನೆ ನಂಬರು ಯಾದಿ ಓದಲಾಯಿತು.

ಹಣ ಇಲ್ಲದೆ ಇರುವದ್ದರಿಂದ ಈ ಕೆಲಸ ತುರ್ತು ನಿಲ್ಲಿಸಬಹುದೆಂದು ತೀರ್ಮಾನಿಸಲಾಯಿತು.

15. ಈ ಕೆಳಗೆ ಕಾಣಿಸಿರುವ ಅಂದಾಜಾಗಳನ್ನು ಮಂಜೂರಿ ಬಗ್ಗೆ ತಾಲ್ಲೂಕು ಬೋರ್ಡು ರೆಜಲ್ಯೂಷ್ಯನ್‌ನೊಂದಿಗೆ ಕಳುಹಿಸಿದ ಚಿಕ್ಕಬಳ್ಳಾಪುರದ ಸಬ್ ಡಿವಿಜ್ ಆಫಿಸರವರ 190ನೆ ಸೆಪ್ಟಂಬರು 30ನೆ ತಾರೀಖಿನ 376ನೆ ನಂಬರು ಯಾದಿ ಓದಲಾಯಿತು.

				ರೂಪಾಯಿಗಳು.
1.	ಚೇಳ್ಳೂರು	ಮುಸಾಫರ್ ಖಾನೆಗೆ ಸುಣ್ಣ ಹಚ್ಚಿಸುವದು	... ...	12
2.	ಸಲ್ಲಕೆರುಪು	ಡಿಟೋ	... ...	10
3.	ಗೂಳೂರು	ಡಿಟೋ	... ...	10
4.	ಗುಟ್ಟಪಾಳ್ಯ	ಡಿಟೋ	... ...	27
5.	ಬಿಳ್ಳೂರು	ಡಿಟೋ	... ...	10
			ಜುಮ್ಲಾ ...	69

ಈ ಬಗ್ಗೆಗಿ ಬೇಕಾಗುವ ಮೊಬಲಗು C. X. (3) "ಹಾವುಗಳನ್ನ ನಾಶಪಡಿಸುವದಕ್ಕೆ" ಎಂಬ ಐಟಂನಲ್ಲಿ ಕಾಣಿಸಿರುವ 500 ರೂಪಾಯಿಗಳ ಪೈಕಿ ಮಂಜೂರ್ಮಾಡಬಹುದೆಂದು ತೀರ್ಮಾನಿಸಲಾಯಿತು.

16. ಗ್ರಾಮಾಂತರಗಳಲ್ಲಿಯೂ ಮತ್ತು ಮ್ಯುನಿಸಿಪಲ್ ಟೌನ್‌ಗಳಲ್ಲಿಯೂ ಇಲಿಗಳನ್ನ ನಾಶಪಡಿಸುವದಕ್ಕೆ ಮಾಡಿದ ಏರ್ಪಾಟು ಕುರಿತು ರಿಪೋರ್ಟು ಮಾಡಬೇಕೆಂದು ಸ್ಯಾನಿಟೆರಿ ಕಮಿಷನರ್ ಸಾಹೇಬರವರ 1908ನೆ ಸೆಪ್ಟಂಬರು 9ನೆ ತಾರೀಖಿನ 1170-77ನೆ ನಂಬರು ಲೆಟರು ಓದಲಾಯಿತು.

ಇದರಿಂದ ಆಗಬಹುದಾದ ಅನೇಕ ಅನುಕೂಲತೆಗಳ ವಿಷಯದಲ್ಲಿ ಜನಗಳಿಗೆ ತಿಳುವಳಿಕೆ ಕೊಟ್ಟು ಇಲಿಗಳನ್ನ ಕೊಲ್ಲುವ ವಿಚಾರದಲ್ಲಿ ಅವಶ್ಯಕವಾದ ಏರ್ಪಾಟು ಮಾಡಬೇಕೆಂತ ತಾಲ್ಲೂಕು ಬೋರ್ಡುಗಳಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

17. ಆಲಂಬಾಡಿ ಕೆರೇ ನೀರಿನಿಂದ ಚಿಕ್ಕ ತಿರುಪತಿ ರಸ್ತೆ ಕೊಚ್ಚಿಕೊಂಡುಹೋಗೆದರೀತಿ ಬಂದು ದೊಡ್ಡಕಟ್ಟೆ ಕಟ್ಟುಸತಕ್ಕ ವಿಚಾರದಲ್ಲಿ ಮಾಲೂರು ಸಬ್ ಡಿವಿಜ್ಞ ಆಫಿಸರವರ 23—6—08ನೆ ಮಕ್ರುಂನ 443ನೆ ನಂಬರು ಯಾದಿ ಓದಲಾಯಿತು.

ಸ್ಥಳವನ್ನು ಪರಾಂಬರಿಸಿ ಅಭಿಪ್ರಾಯವನ್ನೊಡನೆ ತಿಳಿಸಬೇಕೆಂದು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

18. ಚಿಂತಾಮಣಿ-ಚೇಳೂರು ರಸ್ತೆಯ 5-9 ಮೈಲಿಯಲ್ಲಿ ಕಂಚಾರಲಪಲ್ಲಿ ಕೆರೆ ಕೋಡಿಗೆ ಕಬ್ಬಿಣದ ಕಟಿಕಟೆ ಹಾಕಿಸತಕ್ಕ ವಿಚಾರದಲ್ಲಿ 420 ರೂಪಾಯಿಗಳ ಅಂದಾಜಾ ನಿಶಿ ಕಾರ್ಟರ್ ಸಿಗ್ನೇಚರ್ ಬಗ್ಗೆ ಕಳುಹಿಸಿಕೊಟ್ಟ ಕೋಲಾರ ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 30—11—08ನೆ ಮಕ್ರುಂನ 1032ನೆ ನಂಬರು ಡಾಕೆಟ್ ಓದಿ ಮಂಜೂರ್ಮಾಡಲಾಯಿತು.

19. ಮುಳಬಾಗಲ್ ಟ್ರಾವಲರ್ಸ್ ಬಂಗ್ಲೆಯ ಮುರದ ಸಾಮಾನುಗಳಿಗೆ ಎಣ್ಣೆ ಹಚ್ಚಿಸುವದಕ್ಕೋಸ್ಕರ 43 ರೂಪಾಯಿನ ಸಪ್ಲಿಮೆಂಟಲ್ ಅಂದಾಜಾ ನಿಶಿ ಬಂದ 2—12—08ನೆ ಮಕ್ರುಂ 1030ನೆ ನಂಬರು ಡಾಕೆಟ್ ಓದಲಾಯಿತು.

C X (3) ರಲ್ಲಿ ವದಗಿಸಿರುವ 500 ರೂಪಾಯಿಗಳ ಪೈಕಿ ವೆಚ್ಚ ಮಾಡಬಹುದೆಂದು ಮಂಜೂರ್ಮಾಡಲ್ಪಟ್ಟಿತು.

20. ಲೋಕಲ್ ಫಂಡ್ ಆಸ್ಪತ್ರೆಗಳನ್ನು ಕಟ್ಟುವದು ಮತ್ತು ರಿಪೇರಿ ಇವುಗಳ ಬಗ್ಗೆ ತಗಲಬಹುದಾದ ಖರ್ಚಿನ ವಿಚಾರದಲ್ಲಿ ನಡಿಸಬೇಕಾದ ಕ್ರಮಗಳನುಸರಿಸಿ ತಲಖಿದ 1908ನೆ ಅಕ್ಟೋಬರು 23ನೆ ತಾರೀಖಿನ 3891-902—ಲೋ. ಬೋ. 112-08-2ನೆ ನಂಬರು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

21. ಕಂಟ್ರೋಲರ್ ಸಾಹೇಬರವರಿಂದ ಬಂದ 1906—07ನೆ ಸಾಲಿನ ಆಫೈರು ಡಿಸ್ಟ್ರಿಕ್ಟ್ ಫಂಡ್ ಮತ್ತು ಲೋಕಲ್ ಫಂಡ್ ಜನರಲ್ ಬಾಬತು ಲೆಖ್ಕಗಳನ್ನು ರಿಕಾರ್ಡು ಮಾಡಿ ಸಾದರಾದ 29—9—08ನೆ ಮಕ್ರುಂ 3338-47—ಲೋ. ಬೋ. 67-07-27ನೆ ನಂಬರು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

22. 1908ನೆ ಜೂನ್ ತಿಂಗಳಲ್ಲಿ ಚಿಂತಾಮಣಿಯಲ್ಲಿ ನಡೆದ ವ್ಯವಸಾಯ, ಕೈಗಾರಿಕೆ ಮತ್ತು ದನಗಳ ಪ್ರದರ್ಶನ ವಿಚಾರದಲ್ಲಿ ಡಿಪ್ಯುಟಿ ಕಮಿಷನರ್ ಸಾಹೇಬರವರ ರಿಪೋರ್ಟನ್ನು ರೆಕಾರ್ಡು ಮಾಡಿ ಈ ಪ್ರದರ್ಶನಕ್ಕಾಗಿ ಮೆಹನತ್ತು ಮಾಡಿದ ಪೈಸಿಡೆಂಟರಿಗೂ ಮತ್ತು ಸರ್ಕಾರಿ ಉದ್ಯೋಗಸ್ಥರಾದ ಮತ್ತು ಸರ್ಕಾರಿ ಉದ್ಯೋಗದಲ್ಲಿ ಇಲ್ಲದ ಕಮಿಟಿ ಮೆಂಬರುಗಳಿಗೂ ಮತ್ತು ಇನ್ನು ಇದಕ್ಕಾಗಿ ಬಹಳ ಮುತವರ್ಜಿ ವಹಿಸಿದ ಇತರರಿಗೂ ಸರ್ಕಾರದವರ ವೆಚ್ಚಿಗೆಯನ್ನು ತಿಳಿಸಬೇಕೆಂಬುದಾಗಿ ಬಂದ 13—11—08ನೆ ಮಕ್ರುಂ ರೆ. 2922-3—ಅಗ್ರಿ. 107-07-4ನೆ ನಂಬರು ಪ್ರೊಸೀಡಿಂಗ್ಸ್ ಓದಿ ರೆಕಾರ್ಡು ಮಾಡಲಾಯಿತು.

23. ಕೂಲಿ ಜನಗಳಿಗೆ ಪಾವತಿ ಬಗ್ಗೆ 200 ರೂಪಾಯಿಗಳ ಇಂಪ್ರೆಸ್ಟ್ ಹಂಗಾಮಿ ತರೀಖ್ ಇಟ್ಟುಕೊಂಡು ಇರಲು ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕು ಬೋರ್ಡುಗಳಿಗೆ ನಿಯಾಮಕ ಮಾಡಿರುವ 21-11-08ನೆ ಮಕ್ರುಂ 4815-10—ಲೋ. ಬೋ. 178-08ನೆ ನಂಬರು ಪ್ರೊಸೀಡಿಂಗ್ಸು ಕಾಪಿ ಕಳುಹಿಸಿರುತ್ತೆಂದು ಜನರಲ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟಿನ ಸೆಕ್ರಿಟರಿ ಸಾಹೇಬರವರ 8—12—08ನೆ ಮಕ್ರುಂ 5504-10—ಲೋ. ಬೋ. 178-08-3ನೆ ನಂಬರು ಡಾಕೆಟ್ ಓದಿ ರಿಕಾರ್ಡು ಮಾಡಲಾಯಿತು.

24. ಹಾಲಿ ಇರುವ ಕಾಲಸ್ಥಿತಿಗನುಸಾರವಾಗಿ ಸಾಮಾನ್ಯವಾಗಿ ಉಪಯೋಗಕ್ಕೋಸ್ಕರ ಬೇಕಾದ ಪಾನದ ಭಾವಿಗಳು ತೋಡಿಸುವದಕ್ಕೋಸ್ಕರ ಲೋಕಲ್ ಫಂಡ್ ಜನರಲ್‌ನಿಂದ 20,000 ರೂಪಾಯಿಗಳು ಮಂಜೂರ್ಮಾಡಿರುವದಾಗಿ ಗವರ್ನಮೆಂಟಿನಿಂದ ತಲಖಿದ 31—10—08ನೆ ಮಕ್ರುಂ ರೆ. 2541-51—ಅಗ್ರಿ. 69-08-3ನೆ ನಂಬರು ಪ್ರೊಸೀಡಿಂಗ್ಸು ಓದಿ ವಂದನಾಪೂರ್ವಕವಾಗಿ ರೆಕಾರ್ಡು ಮಾಡಲಾಯಿತು.

25. ಬಂದು ವರುಷಕ್ಕೆ ಮಾತ್ರ ಹಂಗಾಮಿಯಾಗಿ ಪುಲುಗೂರು ಕೋಟೆಯಲ್ಲಿ ಪ್ರತಿ ಬುಧವಾರಗಳು ಸಂತೆ ನಡಿಸಬೇಕೆಂದು ತಾಲ್ಲೂಕು ಬೋರ್ಡು ರೆಜಲ್ಯೂಷ್ಣ ನಿಶಿ ಬಂದ ಮಾಲೂರು ಸಬ್ ಡಿವಿಜ್ಞ ಆಫಿಸರವರ 11—12—08ನೆ ಮಕ್ರುಂನ 1022ನೆ ನಂಬರು ಯಾದಿ ಓದಲಾಯಿತು.

ಹಿಂದೆ ನಡಿಯುತ್ತಿದ್ದ ಸಂತೆ ಯಾತಕ್ಕೋಸ್ಕರ ನಿಲ್ಲಿಸಲ್ಪಟ್ಟಿತು ಈ ಭಾಗದಲ್ಲಿ ತಪಶೀಲ್ ಬೇಕೆಂದು ತಾಲ್ಲೂಕು ಬೋರ್ಡಿಗೆ ಪುನಶ್ಚ ಕಟ್ಟು ವಾಪಸು ಕಳುಹಿಸತಕ್ಕದ್ದೆಂದು ತೀರ್ಮಾನಿಸಲ್ಪಟ್ಟಿತು.

26. ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್‌ಸ್ಪೆಕ್ಟರುಗಳನ್ನು ಸ್ಯಾನಿಟೆರಿ ಇಲಾಖೆಯವರ ಅಧಿಕಾರಕ್ಕೆ ವಳಪಡಿಸತಕ್ಕ ವಿಚಾರದಲ್ಲಿ ಅಭಿಪ್ರಾಯ ಬರಸಬೇಕೆಂತ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟೆರಿ ಸಾಹೇಬರವರಿಂದ ಬಂದ 5—12—08ನೆ ಮಕ್ರುಂ 5424-35—ಮ್ಯು. 425-07ನೆ ನಂಬರು ಮಿನೋರಾಂಡಂ ಓದಲಾಯಿತು.

ಈ ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್‌ಸ್ಪೆಕ್ಟರುಗಳು ವರ್ಕ್ ಇನ್‌ಸ್ಪೆಕ್ಟರುಗಳ ಬದಲಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ. ಅಂದಾಜಾಗಳನ್ನು ತಯಾರ್ಮಾಡುವದು ಅಲ್ಲದೆ ಸ್ಯಾನಿಟೇರ್ಷ ಸಂಬಂಧವಾದ ಕೆಲಸಗಳೊಂದಿಗೆ ಸಾಮಾನ್ಯವಾಗಿ ಎಲ್ಲಾ ಬಾಬಿನಲ್ಲೂ ಮೇಲ್ವಿಚಾರಣೆ ಇವುಗಳೇ ಇವರುಗಳ ಮುಖ್ಯವಾದ ಕೆಲಸಗಳಾಗಿರುತ್ತವೆ. ಇದಕ್ಕಾಗಿ ಇವರು ಗ್ರಾಮಗಳಮೇಲೆ ಪುನಹ ಪುನಹ ಸಂಚಾರ ಹೋಗಿ ಸ್ಥಳದಮೇಲೆಯೇ ನಿಂತು ಕೆಲಸಗಳು ಅಂದರೆ ಜಮಾಯಿಸಿರುವ ತಿಪ್ಪೆ ವಗ್ಗೈರೆಗಳನ್ನ ಇವರು ಸ್ವತಃ ಚೆನಾಮಿಸಿರುವ ಜಾಗಾಕ್ಕಾಗಲಿ ಅಥವಾ ಮೇಲ್ಪಟ್ಟ ಅಧಿಕಾರಿಗಳಿಂದ ಚೆನಾಯಿಸಲ್ಪಡುವ ಜಾಗಾಕ್ಕಾಗಲಿ ಸಾಗಿಸೋಣವು ಇಂಥಾದ್ದನ್ನು ಮಾಡಿಸತಕ್ಕದ್ದಾಗಿರುತ್ತೆ. ಬರೀ ತಿರುಗೋಣವೂ ಮತ್ತು ಬೋಧನೆಯೂ ಗ್ರಾಮಾಂತರಗಳಲ್ಲಿ ನಿಷ್ಪ್ರಯೋಜನವೇ ಸರಿ. ತಿಳುವಳಿಕೆ ಇಲ್ಲದೆ ಇರತಕ್ಕ ಜನಗಳಿಗೆ ಸ್ಥಳದಲ್ಲಿ ಆಗಬೇಕಾದ ಕೆಲಸಗಳನ್ನು ಮಾಡಿಸಬೇಕಾಗಿದ್ದರೆ ಈ ರೀತಿ ಬೋ

ಧನೆಯಿಂದ ಆಗತಕ್ಕದ್ದು ಬಹುಕಾಲಾನಂತರ ನಡಿಯುತಕ್ಕದ್ದಾಗಿರುತ್ತೆ. ಇಂಥಾ ಕೆಲಸಗಳು ಯಾವತ್ತು ಸರಿಯಾಗಿ ಜಾರೀಗೆ ತರಬೇಕಾಗಿದ್ದರೆ ಇನ್ಸ್ಪೆಕ್ಟರುಗಳು ಸ್ಥಳದ ವಿದ್ಯಮಾನಗಳನ್ನೆಲ್ಲಾ ಚೆನ್ನಾಗಿ ತಿಳಿದು ಇಂಥಾ ಸಂದರ್ಭಗಳಲ್ಲೆಲ್ಲಾ ಸರಿಯಾದ ಮಾರ್ಗವನ್ನು ತೋರಿಸುವಂಥಾ ಸ್ಥಳದ ಅಧಿಕಾರಿಗಳ ಆಧೀನ ಮತ್ತು ತಾಬೇದಾರಾಗಿ ಇರಬೇಕು. ಆದ್ದರಿಂದ ಆಗಾಗ್ಯೆ ಸಂಚಾರ ಮಾಡಿ ಜನಗಳನ್ನು ಮಂದಟ್ಟು ಮಾಡಿಕೊಳ್ಳತಕ್ಕಂಥಾ ಇತರ ಇಲಾಖೆಗಳಲ್ಲಿ ಡಿಸ್ಟ್ರಿಕ್ಟು ಆಡಳಿತಕ್ಕೆ ಇರುವ ಅಸಿಸ್ಟೆಂಟರುಗಳ ಹಾಗೆ ಬೇರೆ ಡಿಸ್ಟ್ರಿಕ್ಟು ಸ್ಯಾನಿಟೆರಿ ಆಫಿಸರವರು ಇಲ್ಲದಿರೋಣದರಿಂದಲೂ ಮತ್ತು ಈ ಕೆಲಸಕ್ಕಾಗಿ ಬೇರೆ ಸಿಬ್ಬಂದಿಯನ್ನು ಇಟ್ಟುಕೊಳ್ಳಲು ಬೋರ್ಡಿನವರಿಗೆ ಚೈತನ್ಯವಿಲ್ಲವಾದ್ದರಿಂದ ಈ ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್ಸ್ಪೆಕ್ಟರುಗಳನ್ನು ಟೆಕ್ನಿಕಲ್ ಇಲಾಖೆಗೆ ಆಧೀನಪಡಿಸುವದರಿಂದ ಯಾವ ಪ್ರಯೋಜನವೂ ಕಂಡುಬರುವದಿಲ್ಲ. ಅಲ್ಲದೆ ಈ ಇಲಾಖೆಯವರ ಅಭಿಪ್ರಾಯ ಮತ್ತು ಬೋಧನೆ ಮೇರೆಗೆ ಈಗಲೂ ಕೂಡ ಸ್ಥಳೀಯ ವಿದ್ಯಮಾನಗಳಿಗನುಸಾರವಾಗಿ ಕೈಲಾದ ಮಟ್ಟಿಗೂ ನಡಿಯಬಹುದಾಗಿರುತ್ತೆಂತ ಬೋರ್ಡಿನವರು ಅಭಿಪ್ರಾಯ ಪಡುತ್ತಾರೆ.

27. ಈ ಕೆಳಗೆ ಕಂಡ ತಾಲ್ಲೂಕು ಬೋರ್ಡು ಪ್ರೊಸೀಡಿಂಗ್ಸುಗಳು ಓದಿ ರೆಕಾರ್ಡು ಮಾಡಲಾಯಿತು.

	ತಾಲ್ಲೂಕು.		ತಾರೀಖು.				ತಾಲ್ಲೂಕು.		ತಾರೀಖು.		
1.	ಚಿಂತಾಮಣಿ	...	14	9	08	7.	ಚಿಂತಾಮಣಿ	...	20	10	08
2.	ಗೋರೀಬಿದನೂರು	...	ಡಿಟೋ			8.	ಮಾಲೂರು	...	29	10	08
3.	ಬಾಗೇಪಲ್ಲಿ	...	15	9	08	9.	ಬಾಗೆಪಲ್ಲಿ	...	19	10	08
4.	ಗುಡಿಬಂಡೆ	...	28	9	08	10.	ಮುಳಬಾಗಲ್	...	ಡಿಟೋ		
5.	ಶಿಡ್ಲಘಟ್ಟ	...	9	10	08	11.	ಬೌರಿಂಗಪೇಟೆ	...	21	11	08
6.	ಚಿಕ್ಕಬಳ್ಳಾಪುರ	...	14	10	08						

28. 1908ನೆ ನವಂಬರ್ ತಿಂಗಳಲ್ಲಿ ಸ್ಯಾಂಕ್ಷ್ನ್ ಆದ ಕೆಲಸಗಳ ಪಟ್ಟಿಯನ್ನು ಓದಿ ಮಂಜೂರ್ಮಾಡಲಾಯಿತು.

29. 1909ನೆ ಫೆಬ್ರವರಿ ಮಾಹೆಯ 27ನೆ ತಾರೀಖು ಶನಿವಾರ ದಿವಸ ಮುಂದಿನ ಮೀಟಿಂಗ್ ನಡಿಯುತ್ತೆಂದು ತೀರ್ಮಾನಿಸಲಾಯಿತು.

ಎಸ್. ಶ್ಯಾಮಣ್ಣ,
ಛಾರ್ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಸ್ರ 1909ನೆ ಇಸವಿ ಜನವರಿ 30 ರಲ್ಲು.

ಸ್ರ 1909ನೆ ಏಪ್ರಿಲ್ ಮಾಹೆ 2ನೆ ತಾರೀಖು ಲಾಗಾಯಿತು 3ನೆ ತಾರೀಖು ಪರಿಯಿಗೆ ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವ ನಡೆಯುವ ಕಾಲದಲ್ಲಿ, ಸದರೀ ಸ್ಥಳದಲ್ಲಿ ಒಂದು ದನಗಳ ಪ್ರದರ್ಶನ ನಡಿಯುತ್ತೆ.

II. ಪ್ರದರ್ಶನದಲ್ಲಿ ಉತ್ತಮ ದನಗಳಿಗೆ ಈ ಕೆಳಗೆ ಕಂಡಂತೆ ಬಹುಮಾನಗಳು ದೊರೆಯುತ್ತೆ.

A ಕ್ಲಾಸ್. ವ್ಯವಸಾಯದ ಎತ್ತುಗಳು.	1ನೆ ಬಹುಮಾನ	...	20	A ಕ್ಲಾಸ್. ಒಟ್ಟು ರೂಪಾಯಿ	55
	2ನೆ ,,	...	15		
	3ನೆ ,,	...	10		
	4ನೆ ,,	...	10		
B ಕ್ಲಾಸ್. ಬೀಜದ ಗೂಳಿಗಳು.	1ನೆ ಬಹುಮಾನ	...	15	B ಕ್ಲಾಸ್. ಒಟ್ಟು ರೂಪಾಯಿ	25
	2ನೆ ,,	...	10		
C ಕ್ಲಾಸ್. ಹಸುಗಳು.	ಪ್ರತಿಯೊಂದಕ್ಕೂ 5 ರೂಪಾಯಿನಂತೆ ನಾಲ್ಕು ಬಹುಮಾನ.			C ಕ್ಲಾಸ್. ಒಟ್ಟು ರೂಪಾಯಿ	20
D ಕ್ಲಾಸ್. ಒಳ್ಳೆ ಕರುಗಳನ್ನು ಕೊಡುವ ಹಸು.	1ನೆ ಬಹುಮಾನ	...	10	D ಕ್ಲಾಸ್. ಒಟ್ಟು ರೂಪಾಯಿ	10
				ಒಟ್ಟು ಜಮ್ಲಾ ರೂ.	110

III. ಬಹುಮಾನವನ್ನು ಕೊಡಲು ಒಂದು ಕಮಿಟಿಯನ್ನು ಏರ್ಪಡಿಸುತ್ತೆ. ಸದರೀ ಕಮಿಟಿಯ ತೀರ್ಮಾನವು ಆಖೈರಾಗಿರುತ್ತೆ. ಕಮಿಟಿಯವರ ತೀರ್ಮಾನಕ್ಕೆ ಕಾರಣ ಕೇಳಿಕೂಡದು.

IV. ಸ್ಥಳದಲ್ಲಿ ಹುಲ್ಲು ದೊರೆಯುಲು ಏರ್ಪಾಡು ಇಡುತ್ತೆ. ಆದರೆ ದನಗಳ ಸ್ವಂತಗಾರರೂ ತಮ್ಮ ಜಾಗರೂಕತೆಯಲ್ಲಿ ಇರುವದು ಅನುಕೂಲ.

V. ಪ್ರದರ್ಶನಕ್ಕೆ ದನಗಳನ್ನು ತರಲು ಇಷ್ಟವುಳ್ಳವರು ನಂಜನಗೂಡು ತಾಲ್ಲೂಕು ಆಮಿಲರವರಿಗೆ ಜಾತ್ರೆ ಮೊದಲಾಗುವದಕ್ಕೆ ಕೊನೇಪಕ್ಷ 2 ದಿವಸ ಮೊದಲಾಗಿ ಬರೆದುಕೊಳ್ಳಬೇಕು.

VI. ಪ್ರದರ್ಶನ ನಡೆಯುವ ಸ್ಥಳವು ದನಗಳು ಸೇರಲು ಅನುಕೂಲವಾದ್ದಾಗಿದೆ. ಮೈಸೂರು ಮತ್ತು ಬ್ರಿಟಿಷ್ ಕೀಮೆಯಿಂದ ಅನೇಕ ಜನಗಳು ಸೇರುವದ್ದರಿಂದ, ದನಗಳ ವ್ಯಾಪಾರ ಚೆನ್ನಾಗಿ ನಡೆಯಬಹುದು.